ದಿನದಿಂದ ದಿನಕ್ಕೆ ಗಾಢವಾಗುತ್ತಲೇ ಹೋಯಿತು. ಆದರೆ ಗಟ್ಟಿ ಮನೋಸ್ಥೈರ್ಯದ ಮನೋಹರನನ್ನು ಆ ಸೆಳೆತ ವಿಚಲಿತಗೊಳಿಸಿರಲಿಲ್ಲ. ತನ್ನ ವೃತ್ತಿಗೆ ಅದರಿಂದ ಧಕ್ಕೆ ತಂದುಕೊಂಡಿರಲಿಲ್ಲ. ಕವಿತಾಳ ಕುರಿತು ಅದಮ್ಯವಾದ ಪ್ರೇಮ ಅವನ ಮನಸ್ಸನ್ನು ವ್ಯಾಪಿಸಿಕೊಂಡಿತ್ತು.

ಈವರೆಗೂ ತಾನಾಗಲೀ, ಅವಳಾಗಲೀ ಪರಸ್ಪರ ಪ್ರೀತಿಸುವದನ್ನ ವ್ಯಕ್ತಪಡಿಸಿಕೊಂಡಿಲ್ಲ. ಮನೆಯ ಹಿರಿಯರ ನಡುವೆ ತನ್ನ, ಕವಿತಾಳ ಜೊತೆಯಾಗುವ ಯಾವ ಪ್ರಸ್ತಾವವೂ ನಡೆದಿಲ್ಲ. ಹೀಗೇ ಯಾವ ಸಾಧ್ಯತೆಯೂ ಇಲ್ಲದ ಸಂಬಂಧದ ಬಗ್ಗೆ ತನ್ನಲ್ಲಿದ್ದದ್ದು ಅವಳ ಕುರಿತಾದ ಪ್ರೇಮದ ಭ್ರಮೆ ಮಾತ್ರ ಎಂದು ಆತನಿಗೆ ಖಚಿತವಾಗಿ ಅನಿಸತೊಡಗಿತು.

ಊರು, ಕೇರಿಯ ಎಲ್ಲರ ಮನೆಗೂ ಆಪ್ತಳಾದ ಅಮ್ಮನಿಗೆ ಯಾವುದಕ್ಕೋ ಗೋವಿಂದಣ್ಣನ ಮನೆಯ ಬಗ್ಗೆ ವಿಶೇಷ ಒಲವಿತ್ತು; ತನ್ನ ಗಂಡ ತೀರಿಕೊಂಡಾಗ ಎಲ್ಲರಿಗಿಂತ ಹೆಚ್ಚು ಮುಂದಾಗಿ, ಸ್ವಂತ ಅಣ್ಣನಂತೆ ಸಹಾಯಕ್ಕೆ ಒದಗಿದವ ಗೋವಿಂದಣ್ಣ ಎಂದೂ ಇರಬೇಕು. ಹಾಗಾಗಿ ಪರಸ್ಪರ ಆಪ್ತಭಾವದ ಎರಡೂ ಕುಟುಂಬಗಳ ನಡುವೆ ಗಾಢವಾದ ಸಂಬಂಧವಿತ್ತು. ಕವಿತಾಳನ್ನ ಮನೋಹರ ಚಿಕ್ಕಂದಿನಿಂದಲೇ ನೋಡುತ್ತ ಬಂದವ. ಪಿಯುಸಿಯಲ್ಲಿ ಫೇಲಾಗಿ, ಮತ್ತೆ ಓದೂದಿಲ್ಲ ಎಂದು ಬ್ಯೂಟಿಷಿಯನ್ ತರಬೇತಿ ಪಡೆಯಲು ಮೂರ್ನಾಲ್ಕು ತಿಂಗಳು ಹುಬ್ಬಳ್ಳಿಯ ನೆಂಟರ ಮನೆಯಲ್ಲಿದ್ದು, ಅದು ಮುಗಿಸಿ ಬಂದು ಊರಲ್ಲೇ ಸ್ವಂತದ ಬ್ಯೂಟಿ ಪಾರ್ಲರ್ ತೆರೆದಿದ್ದಳು. ಚೆನ್ನಾಗಿ ನಡೆಯುತ್ತದೆ ಎಂದೂ ಅಲ್ಲಿಗೆ ಆಗಾಗ ಹೋಗುವ ತಂಗಿಯೂ ಹೇಳುತ್ತಿದ್ದಳು. ತನ್ನ ಗಡಿಬಿಡಿಯಲ್ಲೇ ಇರುವ ಮನೋಹರನಿಗೆ ಆಕೆ ಕಾಣುತ್ತಿದ್ದುದೂ ವಾರಕ್ಕೆ ನಾಲ್ಕಾರು ಬಾರಿಯಷ್ಟೇ. ಕಂಡಾಗೆಲ್ಲ ಅವನತ್ತ ನೋಡುವ ಕಣ್ಣುಗಳಲ್ಲಿದ್ದ ಮಿಂಚಿಗೆ, ಪ್ರಸನ್ನತೆಗೆ ಮನೋಹರ ಮಾರುಹೋಗಿದ್ದ. ತನ್ನೊಳಗೇ ತಾನು ಅವಳನ್ನ ಇನ್ನಿಲ್ಲದಂತೆ ಪ್ರೀತಿಸುತ್ತ, ಅದನ್ನು ವ್ಯಕ್ತಪಡಿಸಲು ಸಮಯ, ಸನ್ನಿವೇಶ ಲಭ್ಯವಾಗದೇ ತೊಳಲಾಡುತ್ತಿದ್ದ ಸಂದರ್ಭದಲ್ಲೇ ಕವಿತಾಳ ಮದುವೆಯ ಮಾತುಕತೆ ನಡೆದಿತ್ತು.

ಸುಮಾರು ಹೊತ್ತಿನ ನಂತರ ಒಂದು ನಿಶ್ಚಯಕ್ಕೆ ಬಂದ ಮನೋಹರ. ಜೀವದಂತೆ ಪ್ರೀತಿಸುತ್ತಿದ್ದ ಗಂಡನನ್ನ ಕಳೆದುಕೊಂಡ ಅಮ್ಮ ಅದನ್ನ ನೆನಪಿಸಿಕೊಳ್ಳುತ್ತ, ಪರಿತಪಿಸುತ್ತ ಒದ್ದಾಡದೇ, ಎಲ್ಲ ನೋವನ್ನ ತನ್ನೊಳಗಿಟ್ಟುಕೊಂಡು ಮಕ್ಕಳಾದ ನಮ್ಮನ್ನು ಬೆಳೆಸುತ್ತಿಲ್ಲವೇ? ಸದಾ ಸುಡುವ ಸಂಕಟದ ಬೆಂಕಿಯನ್ನ ಒಡಲಲ್ಲಿಟ್ಟಿಕೊಂಡು ಮತ್ತೊಂದು ಒಡಲಿನ ಹೊಸ ಜೀವವನ್ನ ಬೆಳಕಿಗೆ ತರಲು ಶ್ರಮಿಸುತ್ತಿಲ್ಲವೇ? ಅವೆಲ್ಲಕ್ಕಿಂತ ಮುಖ್ಯವೆಂದರೆ ಕೆಲಸದ ಮನೆಯ ಒಡತಿಯಿಂದ ಆಕೆಯ ಹಳೆಯ ಹೊಲಿಗೆ ಮೆಷಿನನ್ನು ಕಂತಿನ ಸಾಲದಲ್ಲಿ ಪಡೆದು, ಹೊಲಿಗೆಯನ್ನ ತಾನಾಗಿಯೇ ಕಲಿತು ಕೇರಿಯ ಎಲ್ಲ ಮನೆಗಳ ಹರಿದ ಹಳೆ ಬಟ್ಟೆಗಳನ್ನ ಮತ್ತೊಂದಿಷ್ಟು ಕಾಲ ಬಳಸಬಹುದಾದ ರೀತಿಯಲ್ಲಿ ಪುಕ್ಕಟೆಯಾಗಿ ಹೊಲಿದುಕೊಡುತ್ತಿಲ್ಲವೇ?

ಯಾವುದು ಬದುಕು? ಸ್ವಂತ ಸುಖಕ್ಕಾಗಿ ಹಂಬಲಿಸುವ, ಅದಕ್ಕೆ ವ್ಯತ್ಯಯವಾದರೆ ತಲ್ಲಣಿಸುವಂಥದ್ದೋ ಇಲ್ಲಾ, ಸ್ವಾರ್ಥವೇ ಮುಖ್ಯವಾದ ಈ ಕಾಲದಲ್ಲಿ ಎಲ್ಲರ ಬದುಕು ಹಸನಾಗಿರಬೇಕು ಎಂದುಕೊಳ್ಳುತ್ತ ಅದಕ್ಕೆ ತುಡಿಯುವದೋ? ಮನೋಹರ ಇಂಥ ಗಡಚಾದ ಪ್ರಶ್ನೆಗಳನ್ನ ತನ್ನ ಅರಿವಿಗೆ ದಕ್ಕುವ ರೀತಿಯಲ್ಲಿ ಕೇಳಿಕೊಳ್ಳುತ್ತ, ಅದಕ್ಕೆ ಉತ್ತರ ಹುಡುಕಿಕೊಳ್ಳುವ ಪ್ರಯತ್ನದಲ್ಲಿದ್ದ. ತನ್ನ ಸುಖಕ್ಕಿಂತ ಅಮ್ಮ, ತಂಗಿಯ ಬದುಕು ಹೆಚ್ಚಿನದು. ವಯಸ್ಸಾದ ಅಮ್ಮನ ಬದುಕು ನೆಮ್ಮದಿಯಲ್ಲಿ ಸಾಗಬೇಕು. ತಂಗಿಗೆ ಆಕೆ ಓದುವಷ್ಟು ಓದಿಸಿ ಅವಳ ಬದುಕಿಗೊಂದು ದೃಢತೆ ಕೊಡಬೇಕು. ಅಂಥ ಜವಾಬ್ದಾರಿಗಳನ್ನೆಲ್ಲ ಮರೆತು ನನ್ನದಷ್ಟೇ ಮುಖ್ಯವೆಂದುಕೊಂಡೆನಲ್ಲ ಎನ್ನುವ ನಾಚಿಕೆಯೂ ಆಯಿತು. ತಟ್ಟನೆ ಅವನಿಗೆ ಕವಿತಾಳ ಕಣ್ಣುಗಳು ತನ್ನ ಅಮ್ಮನ ಕಣ್ಣುಗಳಂತೆ